# ಪಂಪನ ಕಾವ್ಯಗಳಲ್ಲಿ ಅನುಸಂಧಾನದ ನೆಲೆಗಳು

**ಡಾ. ದೀಪಿಕ ಬಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶ್ರೀ ಎಸ್. ಕರಿಯಪ್ಪ ಸ್ನಾತಕೋತ್ತರ ಪದವಿ ಮತ್ತು ಸಂಶೋಧನ ಕೇಂದ್ರ
ಕನಕಪುರ, ರಾಮನಗರ, 562117
ಮೊ: 9538677385
basuyashu43@gmail.com

ಯಾವುದೇ ಕಾಲಘಟ್ಟದ ಸಾಹಿತ್ಯ ಕೃತಿಯು ಅವತ್ತಿನ ಸಾಮಾಜಿಕ ಬದುಕಿನ ಕ್ರಮವನ್ನು ತನ್ನೊಳಗೆ ಇರಿಸಿಕೊಂಡಿರುತ್ತದೆ. ಒಂದು ಪಠ್ಯವನ್ನು ಅಥವಾ ವಸ್ತು ಸಂಗತಿಯನ್ನು ವಿವರಿಸುವಾಗ ಅದರ ಒಳ ದೃಷ್ಟಿಯೊಳಗಿನ ತಿರುಳನ್ನು ಜೀರ್ಣಿಸಿಕೊಂಡು ಅಭಿವ್ಯಕ್ತಿಸಬೇಕು. ಕನ್ನಡದ ಅನೇಕ ಬರಹಗಳು ಇವತ್ತಿಗೂ ಮರುಓದಿಗೆ, ಮರುಚರ್ಚೆಗೆ ಒಳಗಾಗುವುದರ ಹಿಂದಿರುವ ಚಿಂತನಾ ಮಾದರಿಗಳನ್ನು ಓದುಗನು ಗ್ರಹಿಸಬೇಕಾಗಿದೆ. ಏಕೆಂದರೆ ಸಾಹಿತ್ಯ ಬರಹವು ಕಾಲ, ದೇಶ, ಧರ್ಮ, ಜಾತಿ ಎಲ್ಲವನ್ನು ಮೀರಿ ಸ್ವತಂತ್ರವಾಗಿ ನಿಲ್ಲುವಂತದ್ದು. ಪಂಪ ರಚಿಸಿದ ಆದಿಪುರಾಣ ಕಾವ್ಯವು ಜೈನಧರ್ಮದ ಆಚರಣೆ, ನಂಬಿಕೆಗಳ ಪ್ರಶ್ನೆಯನ್ನು ಮುಂದಿಡುತ್ತಲೇ ಲೌಕಿಕ ಬದುಕಿನ ನಿರರ್ಥಕತೆಯನ್ನು, ಅಲೌಕಿಕ ಬದುಕಿನ ಸಾರ್ಥಕತೆಯನ್ನು ಹುಡುಕುತ್ತಾ ಸಾಗುತ್ತದೆ. ಮನುಷ್ಯನ ಬದುಕಿನ ಕ್ಷಣಿಕತೆಗೆ ಅಸಹ್ಯ ಪಡುವ ಆದಿನಾಥ ತನ್ನ ರಾಜ್ಯಾಧಿಕಾರ ಮತ್ತು ಸಂಪತ್ತನ್ನು ಹಂಚುವುದು ತನ್ನ ಮಕ್ಕಳಿಗೆ ವಿನಹ ಸಾಮಾನ್ಯರಿಗಲ್ಲ. ದಿಗ್ವಿಜಯ ಹಾಗೂ ಚಕ್ರರತ್ನದ ಮೂಲಕ ಆರು ಖಂಡಗಳ ಅಧಿಪತಿಯಾದ ಭರತ ತನ್ನ ಅಹಂಕಾರದಿಂದಲೇ ಅಧಃಪತನಕ್ಕೆ ಒಳಗಾಗುತ್ತಾನೆ. ಈ ಕಾವ್ಯ ಎತ್ತುವ ಸಾಂಸಾರಿಕ ಸುಖ, ವೈಯಕ್ತಿಕ ಭೋಗಾಕಾಂಕ್ಷೆ, ಅಹಂಕಾರ, ರಾಜ್ಯಲಕ್ಷ್ಮಿಯ ಹಿಡಿತ, ಜೀವನ ನಶ್ವರ, ಮೋಕ್ಷ, ಕೇವಲಿಜ್ಞಾನ, ದಾಯಾದಿ ಕಲಹದ ಗೋಜಲುಗಳಿಗೆ ಪಂಪಭಾರತ ಕಾವ್ಯವು ಉತ್ತರ ಹುಡುಕುತ್ತಾ ಸಾಗುತ್ತದೆ. ಧರ್ಮವನ್ನು ಬಯಸುವ ಆದಿಪುರಾಣ, ಧರ್ಮದ ರಕ್ಷಣೆಗಾಗಿ ನಡೆಯುವ ಕುರುಕ್ಷೇತ್ರ, ಜೀವನ ನಶ್ವರ ಎನ್ನುವ ಆದಿನಾಥ, ಜೀವನ ಪ್ರೀತಿಯ ಆಗರವಾದ ಕುಂತಿಯ ಕೂಡುಪರಿವಾರ ಪರಸ್ಪರ ಮುಖಾಮುಖಿಯಾಗುತ್ತಾರೆ. ಆದಿ ಪುರಾಣದೊಳಗೆ ಕಾವ್ಯಧರ್ಮ ಮತ್ತು ಧರ್ಮವನ್ನು ಸಮದೂಗಿಸುವ ಪಂಪನ ಆಸಕ್ತಿ ಪ್ರಧಾನವಾಗಿ ತಾನು ಅನುಸರಿಸಿಕೊಂಡು ಬಂದಿರುವ ಜೈನ ಧರ್ಮದ ತಿರುಳನ್ನು ಸಾಮಾನ್ಯನಲ್ಲಿ ಬಿತ್ತುವುದೇ ಆಗಿದೆ. ಹಾಗಾಗಿ ಆದಿನಾಥನ ಭವಾವಳಿಗಳನ್ನು ವಿವರಿಸುವ ಜೊತೆಗೆ ಭರತ ಬಾಹುಬಲಿಯ ಯುದ್ಧದ ಸನ್ನಿವೇಶವನ್ನು ಕಟ್ಟಿಕೊಡುತ್ತಾನೆ. ಕಿ. ರಂ ನಾಗರಾಜುರವರು ಆದಿನಾಥನ ವೈರಾಗ್ಯ ಹಾಗೂ ಭರತನ ರಾಜತ್ವವನ್ನು ವಿವರಿಸುತ್ತಾ : ಪಂಪನ ಶೋಧನೆಯ ನೆಲೆಗಳು ಒಂದು ಸಾಂಸ್ಕೃತಿಕ ಸಂದರ್ಭದ ಜಾಗೃತ ಅವಸ್ಥೆಯನ್ನು ಅನುಲಕ್ಷಿಸಿದವಾಗಿವೆ. ಧರ್ಮದ ಮತ್ತು ರಾಜಪ್ರಭುತ್ವದ ನೆಲೆಗಳನ್ನು ಪರಸ್ಪರ ಮುಖಾಮುಖಿಗೊಳಿಸುವ ಸಂದರ್ಭಗಳು 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ'ಗಳಲ್ಲಿ ಸಾಕಷ್ಟು ದೊರೆಯುತ್ತವೆನ್ನುತ್ತಾರೆ(ಪು. ಸಂ. ೧೫೦).

ಭರತನ ಸಾಮ್ರಾಜ್ಯಾಕಾಂಕ್ಷೆಗೆ ಬೆಂಬಲ ನೀಡಲಾಗದೆ, ಅದರಿಂದ ತಪ್ಪಿಸಿಕೊಳ್ಳಲೂ ಸಾಧ್ಯವಾಗದೆ ಜೈನ ದೀಕ್ಷೆಯ ಕಡೆ ಮುಖ ಮಾಡುವ ಭರತನ ಉಳಿದ ಸಹೋದರರು 'ಹಿರಿಯಣ್ಣನು ತಂದೆ ಸಮಾನ, ಗುರು ಸಮಾನ. ಅವನಿಗೆ

ಎರಗುವುದು ಅವಮಾನವಲ್ಲ. ಇಲ್ಲಿ ಪ್ರಶ್ನೆ ಬಂದಿರುವುದು ಆಳು ಮತ್ತು ಅರಸರ ನಡುವೆ. ನಾವು ತಲೆಬಾಗಿದರೆ. ನಮ್ಮದೇ ಅಕ್ಕಿಕೊಟ್ಟು ಅವನುಂಡ ಮೇಲೆ ನಾವುಣ್ಣ ಬೇಕಾಗುತ್ತದೆ. ಈ ಪರಿಸ್ಥಿತಿ ನಮಗೆ ಬೇಡವೆನ್ನುತ್ತಾರೆ. ಮನುಷ್ಯನೊಳಗಿನ ಸಿನಿಕತನಗಳನ್ನು ಪಂಪ ಬಹಳ ಸೂಕ್ಷ್ಮವಾಗಿ ಇಲ್ಲಿ ವಿವರಿಸುತ್ತಾನೆ. ಭರತನೊಂದಿಗೆ ಯುದ್ಧ ಮಾಡಿ ಅವನ ಅಧೀನರಾಗುವುದಕ್ಕಿಂತ ದೀಕ್ಷೆಯ ಕಡೆ ಮುಖ ಮಾಡುವುದೇ ವಾಸಿ ಎನ್ನುವ ಇವರು ಆದಿದೇವನ ಬಳಿ ಕೇಳಿಕೊಳ್ಳುವುದು **'ಭರತನನೆಮಗವಯವದೆರಗಿಸುವ ತಪಮನೀಗಳೆ ದಯೆಗೆಯ್'**(ಪು – ೯೬, ಆದಿಪುರಾಣ ಸಂಗ್ರಹ ಎಲ್. ಗುಂಡಪ್ಪ) ಎಂದು. ಇದನ್ನು ಕೇಳಿ ವಿಸ್ಮಿತನಾಗುವ ಭರತ ತನ್ನ ಸಾಮಾರ್ಥ್ಯದ ಬಗೆಗೆ ಅಹಂಕಾರ ಪಡುವ ಜೊತೆ ಜೊತೆಗೆ ಬಾಹುಬಲಿಯನ್ನು ಅಧೀನನಾಗಿಸುವ ತಂತ್ರಗಾರಿಕೆಯನ್ನು ಎಣಿಯುತ್ತಾನೆ.

ಸಮಾಜದೊಳಗೆ ಕೌಟುಂಬಿಕ ನೆಲೆಯ ಸಂಬಂಧಗಳಲ್ಲಿ 'ಭೂ ಒಡೆತನದ ಹಕ್ಕುದಾರಿಕೆ' ಅಧಿಕಾರ ಸ್ಥಾನದಲ್ಲಿರುತ್ತದೆ. ಆದಿದೇವನ ಆಸ್ತಿ ಹಂಚಿಕೆಯಲ್ಲಿ ಹೆಣ್ಣು ಮಕ್ಕಳಿಗೆ ಯಾವುದೇ ಹಕ್ಕಿಲ್ಲ. ಹಿರಿಯ ಮಗನಿಗೆ ರಾಜ ಪದವಿ, ಕಿರಿಯ ಹೆಂಡತಿಯ ಮಗನಿಗೆ ಯುವರಾಜ ಪದವಿ. ಉಳಿದವರಿಗೆ ಒಂದೊಂದು ಪ್ರದೇಶದ ರಾಜರನ್ನಾಗಿ ಮಾಡಿ ವೃಷಭನಾಥ ಕೈವಲ್ಯ ಜ್ಞಾನ ಪಡಿದಿದ್ದಾನೆ. ಭರತನ ರಾಜತ್ವವನ್ನು, ಆದಿನಾಥನ ತಪೋರಂಗದ ಉತ್ತುಂಗವನ್ನು ಈ ಪದ್ಯದಲ್ಲಿ ಪಂಪ ಚಿತ್ರಿಸಿದ್ದಾನೆ :

**ನೆಗಳ್ದ ತಪೋರಾಜ್ಯದೆ ಬಗೆಮಿಗೆ**

**ನಿಂದಂ– ವೃಷಭನಾಥನತ್ತೊಂದೆಡೆಯೊಳ್**

**ಜಗತೀರಾಜ್ಯದೆ ಬಗೆ ಕೈ ಮಿಗೆ**

**ನಿಂದಂ– ಭರತರಾಜನಿತ್ತೊದೆಡೆಯೊಳ್**

ಇದರಿಂದ ಸಂತೃಪ್ತನಾಗದ ಭರತ ಚಕ್ರರತ್ನದ ಉದಯದ ನೆಪವೊಡ್ಡಿ ಅದನ್ನು ಮುಂದೆ ಮಾಡಿಕೊಂಡು ದಿಗ್ವಿಜಯ ಕೈಗೊಳ್ಳುವುದು ಅವನೊಳಗಿನ ಅಧಿಕಾರದ ವ್ಯಾಮೋಹವನ್ನು ತೋರುತ್ತದೆ. ಅಯೋಧ್ಯಾನಗರವನ್ನು ಪ್ರವೇಶಿಸದ ಚಕ್ರರತ್ನದ ಸನ್ನಿವೇಶವು ಮನುಷ್ಯನ ದುರಾಸೆಯ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಭರತನ ಒಳಗೆ ತನ್ನ ತಮ್ಮಂದಿರು ಸ್ವತಂತ್ರವಾಗಿರುವುದರ ಬಗ್ಗೆ ಅಸಮಾಧಾನವಿದೆ. ಏಕೆಂದರೆ ಭರತನಿಗೆ ತನ್ನ ಸಹೋದರರು ತನ್ನ ದಿಗ್ವಿಜಯವನ್ನು ಸಂಭ್ರಮಿಸುತ್ತಿಲ್ಲ ಸ್ವಾಗತ ಮಾಡಲು ಯಾರು ಬಂದಿರುವುದಿಲ್ಲ. ಹಾಗಾಗಿ ಇವರನ್ನು ತನ್ನ ಅಧೀನರನ್ನಾಗಿಸಿಕೊಳ್ಳುವ, ಅವರ ಭೂ ಒಡೆತನವನ್ನು ತನ್ನದಾಗಿಸಿಕೊಂಡು ಈ ಲೋಕದಲ್ಲಿ ಏಕಚಕ್ರವರ್ತಿಯಾಗಲು ಬಯಸುತ್ತಿದ್ದಾನೆ. ಭರತನಾಗಲಿ ಬಾಹುಬಲಿಯಾಗಲಿ ತಮ್ಮ ಸ್ವಾಬಿಮಾನವನ್ನೂ, ಅಹಂಕಾರವನ್ನು ಶೌರ್ಯ ಪ್ರದರ್ಶನವಿಲ್ಲದೆ ಬಿಡುವವರಲ್ಲ. ಬಾಹುಬಲಿಯನ್ನು ಗೆಲ್ಲುವುದು ಅಷ್ಟು ಸುಲಭವಲ್ಲವೆಂಬ ಅರಿವು ಭರತನಿಗಿದೆ. ಅದಕ್ಕಾಗಿಯೇ

DOI: 10.59176
http://www.kristujayantijournal.com/index.php/KJKSP

**‘ಖರ ಕಿರಣ ಸ್ಫುರಿತಕ್ಕಿದಿರುರಿವಂತಿರೆ**

**ಸೂರ್ಯಕಾಂತಮೆನ್ನೀ ತೇಜ**

**ಸ್ಸ್ಫುರಿತಕ್ಕೆ ಸೆಣಸಿನೊಳ್ ಮಾರುರಿಗುಂ**

**ಸೈರಿಸದು ತೇಜಮಾ ಭುಜಬಲಿಯಾ’**

ಎಂದು ಅವನನ್ನು ಮೊದಲು ಸಮಾಧಾನದಿಂದ ಸಂತೈಸುವ ಸಾಮವನ್ನು ಬಳಸುವೆನು. ಅವನು ಬಗ್ಗದಿದ್ದರೆ **‘ಪದವಡಿಸಲೆನ್ನ ಬಯಕೆಯ ದಂಡಂ’** ಎನ್ನುವುದರಲ್ಲಿಯೇ ಭರತನು ಯುದ್ಧ ಮಾಡಿಯಾದರೂ ಬಾಹುಬಲಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕೆನ್ನುವ ತೀರ್ಮಾನಕ್ಕೆ ಬಂದಿದ್ದಾನೆ. ಬಾಹುಬಲಿಯ ಜೊತೆಗೆ ಸಂಧಾನಕ್ಕಾಗಿ ಮಾತಿನ ಕೌಶಲ್ಯದಿಂದ ಎದುರಾಳಿಯನ್ನು ಸೆಳೆಯಬಲ್ಲ ದೂತ ಮಹತ್ತರನನ್ನು ನೇಮಿಸುತ್ತಾನೆ. ಪೌದನಾಪುರ ಮತ್ತು ಬಾಹುಬಲಿಯ ಶ್ರೀಮಂತಿಕೆಯನ್ನು ಕಂಡು ಆಶ್ಚರ್ಯಗೊಂಡ ಮಹತ್ತರನು

**ಪುರು ಪರಮೇಶ್ವರನ ಪುತ್ರಂ**

**ಭರತೇಶ್ವರ ಚಕ್ರವರ್ತಿಗನುಜನೆನಲ್**

**ಸುಂದರ ರೂಪನೀ ಕುಮಾರನ್ಗೆ**

**ಗೊರೆ ಚಕ್ರಿಗಮೆಸೆಯದಿನಿತು ತೇಜಸ್ಸ್ಫುರಿತಂ** ಎಂಬ ಉದ್ಗಾರ ತೆಗೆಯುತ್ತಾನೆ. ಭರತ ಚಕ್ರವರ್ತಿಯ ಸೋಲು ಇಲ್ಲಿಂದ ಆರಂಭವಾಗುತ್ತದೆ. ನಮ್ಮ ಚಕ್ರವರ್ತಿಯ ಸಾಮಾರ್ಥ್ಯ ಬಾಹುಬಲಿಯ ಮುಂದೆ ಸಪ್ಪೆ ಎಂದುಕೊಳ್ಳುವ ಮಹತ್ತರ ಮತ್ತು ಬಾಹುಬಲಿಯ ನಡುವಿನ ಮಾತಿನ ಚಕಮಕಿ ಕೇವಲ ತೋರಿಕೆಯಷ್ಟೇ. ಮಹತ್ತರ ತಂದಿರುವ ಲೇಖನದ ಪೂರ್ತಿ ಭಾಗವನ್ನಾಗಲಿ, ಅವನು ಒಪ್ಪಿಸುತ್ತಿರುವ ತನ್ನ ದೊರೆಯ ದಿಗ್ವಿಜಯದ ವರದಿಯನ್ನಾಗಲಿ ಕೇಳಿಸಿಕೊಳ್ಳುವ ವ್ಯವಧಾನ ಪೌದನಾಪುರದ ಅರಸನಿಗಿಲ್ಲ. ಭರತನ ದಿಗ್ವಿಜಯದ ಸೋಲುಗಳನ್ನು ಮಹತ್ತರನಿಗೆ ಪರಿಚಯಿಸುವಲ್ಲಿ ರಾಜತ್ವವನ್ನು ವಿಸ್ತರಿಸುವ ಹಿಂದಿರುವ ಹೊಗಳುಭಟ್ಟರು ಕಟ್ಟಿಕೊಡುವ ಚರಿತ್ರೆಯೇ ಬೇರೆ, ಸಾಮಾನ್ಯರಲ್ಲಿ ನೆಲೆನಿಂತಿರುವ ವಾಸ್ತವದ ಸಂಗತಿಯೇ ಬೇರೆ ಎಂಬುದನ್ನು ಪಂಪನು ಬಾಹುಬಲಿಯ ಮೂಲಕ ಹೇಳಿಸುತ್ತಾನೆ. ಪಂಪ ಶ್ರೇಷ್ಠನಾಗುವುದು ಈ ಭಾಗದಲ್ಲಿಯೇ. ನಿಜವಾದ ಚರಿತ್ರೆಯೆಂದರೆ ಅದು ಸಾಮಾನ್ಯನೊಳಗೆ ಬದುಕಿರುತ್ತದೆಂಬುದನ್ನು ಮಾರ್ಮಿಕವಾಗಿ ವಿವರಿಸುತ್ತಾನೆ :

**‘ನೀನ್ ನಿನ್ನ ನೃಪನ ದಿಗ್ವಿಜಯೋನ್ನತಿಯಂ ಪೊಗಳ್ದು ಮೂರ್ಛೆವೋಪಯ್ ‘ಉತ್ತರ ಭಾರತದೊಳಾದಾಪತ್ತಂ ನೀನರಿಯೇ ಆವರ್ತರ್ ಸುತ್ತಲುಮೇಸಾಡಿ ಪಿರಿದು ತಿಣಿಕಂ ತಂದರ್, ಬೇಡವಡೆ ಮುಸುರಿಕೊಂಡೇಸಾಡಿ ಸುರುಳ್ದೆಗಿದು**

DOI: 10.59176
http://www.kristujayantijournal.com/index.php/KJKSP 

**ಕೊಡೆಯ ಚರ್ಮದ ಮರೆಯೊಳ್ ಗೂಡುಗೊಳತಿದ್ ಶೌರ್ಯ ಕ್ರೀಡೆ'**. ಚಕ್ರವನ್ನು ಮುಂದಿಟ್ಟುಕೊಂಡು ಬಿಕ್ಷೆ ಬೇಡಿ ಸಾಂರಾಜ್ಯವನ್ನು ವಿಸ್ತರಿಸಿರುವ ನಿನ್ನ ದೊರೆಯನ್ನು ಸಾಮಾನ್ಯರಾದ ಮೇಘಮುಖರಾದ ದೇವತೆಗಳು, ಕಾಡಿನ ಬೇಡ ಸಮುದಾಯಗಳು ಎದುರಿಸಿದ್ದಾರೆ. ನಿಮ್ಮ ಸೈನ್ಯದ ಅಧಿಪತ್ಯವನ್ನು ಒಪ್ಪಿಕೊಳ್ಳದೆ ಅವರನ್ನು ಚಲ್ಲಾಪಿಲ್ಲಿಯಾಗಿ ಓಡಿಸಿದ್ದಾರೆ. ರಾಜನನ್ನೇ ಎದುರಿಸುವ ಅವನ ಅಧೀನದಲ್ಲಿ ಬದುಕಲು ಇಚ್ಚಿಸದ ಶೌರ್ಯವಿರುವ ಸಾಮಾನ್ಯರು ಇಲ್ಲಿದ್ದಾರೆ ಎಂಬುದು ನಿನ್ನ ದೊರೆಗೆ ಅರ್ಥವಾಗಿಲ್ಲ. ವೃಷಭಾಚಲದಲ್ಲಿ ಹಿಂದಿನವರ ಹೆಸರನ್ನು ಅಳಿಸಿ ತನ್ನ ಹೆಸರನ್ನು ಬರೆಸಿಕೊಂಡಾಗ ಸಂಪೂರ್ಣವಾಗಿ ಕೆಳಮುಖನಾಗಿದ್ದಾನೆ. ಅವನ ಬಗ್ಗೆ ಹೊಗಳುವ ಅವಶ್ಯಕೆಯಿಲ್ಲ. ಒಬ್ಬ ರಾಜನಿಗೆ ಸಂಪತ್ತು ಎಂದರೆ ಅದು ಯಶಸ್ಸು. ಜನರು ನೀಡುವ ಅಭಿಮಾನ. ಅದನ್ನೇ ಕಳೆದುಕೊಂಡು ರಾಜಾಧಿರಾಜನಾಗಲು ಬಯಸುತ್ತಿರುವ ನಿನ್ನ ಚಕ್ರವರ್ತಿ ಆಜಿಗೆ ಬಂದೊಡ್ಡಲ್ಕೆ ಪೇಳ್ ಸಂಗರ ನಿಕಷದೊಳೆಮ್ಮಂದಮಂ ನೀನೆ ಕಾಣ್ಬಯ್' ಎಂದು ಯುದ್ಧಕ್ಕೆ ಮುನ್ನುಡಿ ಬರೆಯುತ್ತಾನೆ.

ಪಂಪಭಾರತದಲ್ಲಿ ಸಂಧಾನದ ನೇತೃತ್ವ ವಹಿಸುವ ಕೃಷ್ಣ ಕೌರವನ ಓಲಗದಲ್ಲಿ ಮಾತಾಡುವಾಗ ದುರ್ಯೋಧನನ ಮಿತಿಗಳನ್ನು ಹೇಳುತ್ತಾನೆ. ಗಂದರ್ವರಾಜ ನಿನ್ನನ್ನು ಅಪಹರಿಸಿದ್ದಾಗ ಗುರು, ಗುರುಪುತ್ರ, ಬೀಷ್ಮ ಯಾರು ಬಿಡಿಸಲಾಗದಾಗ ಅರ್ಜುನನೇ ನಿನ್ನನ್ನು ಮುಕ್ತಗೊಳಿಸಿದ್ದಾನೆ. ಹಾಗಾಗಿ ಅವನೊಂದಿಗೆ ರಾಜಿ ಮಾಡಿಕೊಳ್ಳುವುದು ಉತ್ತಮ. ಇಲ್ಲವಾದಲ್ಲಿ ಯುದ್ಧದಲ್ಲಿ ಸೋಲಬೇಕಾಗುತ್ತದೆ. ಐದು ಗ್ರಾಮಗಳನ್ನಾದರು ನಿನ್ನ ಸೋದರರಿಗೆ ನೀಡು. ಅವರೇನು ರಾಜ ಪದವಿಯನ್ನು ಬೇಡುತ್ತಿಲ್ಲ. ರಾಜನಾದವನ ಕೆಲಸವನ್ನು ಜನ ಒಪ್ಪಬೇಕು ನೀನು ಮಾಡುತ್ತಿರುವ ಕೆಲಸ ಸಾಮಾನ್ಯನಿಂದ ಹಿಡಿದು ಅರಮನೆಯ ಹಿರಿಕರಿಗೂ ಒಪ್ಪಿತವಲ್ಲ ಎಂದು ಸಭೆಯಲ್ಲಿ ಹೇಳುವುದು ಅವನನ್ನು ಮತ್ತಷ್ಟು ಕೆರಳಿಸುತ್ತದೆ. ಭರತನಾದರೂ ತನ್ನ ದಿಗ್ವಿಜಯವನ್ನು ಸಂಭ್ರಮಿಸುವ ಬದಲು ತನ್ನ ತಮ್ಮಂದಿರು ತನಗೆ ಅಡಿಯಾಳಾಗಬೇಕೆಂಬ ದುರಾಸೆಯಿಂದ ಅದನ್ನು ನೇರವಾಗಿ ವ್ಯಕ್ತಪಡಿಸಲಾರದೆ, ಮನದಲ್ಲಿ ಯುದ್ಧದ ಆಕಾಂಕ್ಷೆಯಿದ್ದರೂ ಲೋಕದ ಅಪವಾದದಿಂದ ತಪ್ಪಿಸಿಕೊಳ್ಳಲು ಬಾಹುಬಲಿಯೊಂದಿಗೆ ಸಂಧಾನದ ಕಾರ್ಯದಲ್ಲಿ ತೊಡಗುತ್ತಾನೆ.

**ಆತನಂ ಸಾಮದಿಂದಮಳವಡಿಸಿ ನೋಡುವೆಂ**

**ಸಾಮದೊಳಂಪದವಡೆದೊಡೆ ಬಳಿಕಿರ್ದಪ್ಪುದಲ್ತೆ**

**ಪದವಡಿಸಲೆನ್ನ ಬುಕೆಯ ದಂಡಂ'** ಎನ್ನುವ ಭರತನ ಮಾತಿನಲ್ಲಿ ಅತಿರೇಕದ ನಾನತ್ವವನ್ನು ಕಾಣಬಹುದು. ಬಾಹುಬಲಿ ಇತರ ಸಹೋದರರಂತೆ ಸುಲಭವಾಗಿ ದಕ್ಕುವುದಿಲ್ಲ. ತನ್ನ ಅದಿಕಾರವನ್ನು ಬಿಟ್ಟು ಕೊಡುವುದಿಲ್ಲ. ಆದರೂ ಪ್ರಯತ್ನವಾಗಿ ಮಹತ್ತರನನ್ನು ಸಂಧಾನಕ್ಕಾಗಿ ಕಳುಸಿಕೊಡುತ್ತಾನೆ. ಈ ಕಡೆಗೆ ಬಾಹುಬಲಿಯಾದರೂ ತನ್ನ ಅಣ್ಣನ ಶ್ರೇಯಸ್ಸನ್ನು ತನ್ನದೆಂದು ಸಂತೋಷಿಸಲಾರ. ಇವರಿಬ್ಬರೂ ಯುದ್ಧವಿಲ್ಲದೆ, ತಮ್ಮ ತಮ್ಮ ಸಾಮರ್ಥ್ಯದ ತೋರಿಕೆಯಿಲ್ಲದೆ ಗೆಲುವನ್ನಾಗಲಿ ಸೋಲನ್ನಾಗಲಿ ಸ್ವೀಕರಿಸುವ ಜಾಯಮಾನದವರಲ್ಲ. ಈ ಮನಸ್ಥಿತಿ ಆದಿಪುರಾಣದಲ್ಲಿ ವೈಯಕ್ತಿಕವಾಗಿದ್ದು ಪಂಪಭಾರತದಲ್ಲಿ ಸಾಮೂಹಿಕಗೊಳ್ಳುತ್ತದೆ. ಎರಡು ಕಡೆಯ ಮಂತ್ರಿಗಳು ಬಾಹುಬಲಿಯ ಮುಂದೆ ಧರ್ಮಯುದ್ದದ ಪ್ರಸ್ತಾಪವಿಟ್ಟಾಗ **'ಎನ್ನ**

**ಚತುರಂಗ ಬಲಮನಿದಂ ನರರಾರಾಂಪರೆಂಬ ನಿಮ್ಮರಸನ ಗರ್ವೋನ್ನತಿಯುಡುಕುಮನಿನಿಸಾನುಂ ನೋಡಿಂ ಧರ್ಮಯುದ್ಧಮಕ್ಕೆಮ ಬಳಿಯಂ'** ನಿಮ್ಮ ರಾಜನ ಗರ್ವ ಇಳಿದ ಬಳಿಕ ಧರ್ಮದ ಮಾತಾಡಿ ಎನ್ನುವ ಬಾಹುಬಲಿಯ ಪೌರುಷದ ನುಡಿಗಳು ಭರತನ ದರ್ಪಕ್ಕಿಂತ ಭಿನ್ನವಾಗಿಲ್ಲ. ಇವರಿಬ್ಬರು ಮನುಷ್ಯನ ಅಧಿಕಾರದಾಸೆಯ ಗುಣಗಳನ್ನು ಬಿಡುವವರಲ್ಲ. ಒಬ್ಬನದು ಕಿತ್ತುಕೊಳ್ಳುವ ಮನಸ್ಸಾದರೆ ಮತ್ತೊಬ್ಬನದು ಅಹಂಕಾರವನ್ನು ಇಳಿಸುವ ಪ್ರಯತ್ನ. ಇಲ್ಲಿ ನಡೆಯುವ ಸಂಧಾನ ಕೇವಲ ನೆಪಮಾತ್ರ. ಹಾಗಾಗಿಯೇ ಭರತನ ಲೇಖನವನ್ನು ಪೂರ್ತಿ ಓದಲು ಬಿಡದೆ ಬಾಹುಬಲಿ ಭರತನ ಇಡೀ ದಿಗ್ವಿಜಯದ ವಿಫಲತೆಯನ್ನು ಹೇಳುವುದು.

ವಿಕ್ರಮಾರ್ಜುನ ವಿಜಯದೊಳಗೆ ಅಜ್ಞಾತವಾಸ ಮುಗಿಸಿ ತಮ್ಮ ರಾಜ್ಯವನ್ನು ಮರಳಿ ಪಡೆಯಲು ಯುದ್ಧ ಮಾಡಬೇಕಾದ ಅನಿವಾರ್ಯತೆಯನ್ನು ಅರಿತ ಯುದಿಷ್ಟಿರ ದುರ್ಯೋಧನನೊಂದಿಗೆ ಸಂಧಾನಕ್ಕೆ ಕಳುಹಿಸುವುದು ಕೃಷ್ಣನನ್ನು. ಇಲ್ಲಿಯೂ ಕೂಡ ನೆಪಕಷ್ಟೆ ಸಂಧಾನದ ಮಾತುಕತೆ ಬರುತ್ತದೆ. ಇದನ್ನು ಅರಿಯದಷ್ಟು ದಡ್ಡನಲ್ಲ ಸುಯೋಧನ. ಕೃಷ್ಣನಿಗೆ ನೇರವಾಗಿಯೇ **'ಪುಸಿಯೆನೆ ಸಾಮಮಂ ನುಡಿದು ಭೇದಮನುಂಟೊಡತಾಗೆ ಮಾಡಿ ಛಿದ್ರಿಸಲೊಳಪೊಕ್ಕು' ಎನ್ನುತ್ತಾನೆ.** ನೀನಿರುವಾಗ ಯುದ್ಧಮಾಡಿ ಗೆಲ್ಲಬಹುದಾದ ಸಾಮರ್ಥ್ಯವುಳ್ಳ ಪಾಂಡವರಿರುವಾಗ ಸಂಧಾನದ ಮಾತಾಡುತ್ತಿರುವುದು ನಿನ್ನ ಕುತಂತ್ರ. ಇಲ್ಲಿ ನಮ್ಮ ನಮ್ಮ ನಡುವೆ ಒಡಕು ಮೂಡಿಸುವ ಪ್ರಯತ್ನವಿದು ಎಂದು ಮೂದಲಿಸುತ್ತಾನೆ. ಧರ್ಮರಾಯನು ಕೂಡ ಮಾತಿಗೆ ನಿಷ್ಕಪಟಿಯಾಗಿ ಕುರುರಾಜನೊಂದಿಗೆ ಐದು ರಾಜ್ಯ ಕೇಳು ಇಲ್ಲದಿದ್ದರೆ ನನ್ನ ಪರಾಕ್ರಮವನ್ನು ತೋರುತ್ತೇನೆನ್ನುವ ಮಾತಿನಲ್ಲಿಯೇ ಇವರೆಲ್ಲರೂ ಯುದ್ಧದ ನಿರೀಕ್ಷೆಯಲ್ಲಿರುವುದು ಗೋಚರವಾಗುತ್ತದೆ. ಆದಿ ಪುರಾಣದಲ್ಲಿ ವಿವರಿಸಲಾಗದ ಯುದ್ಧದವರ್ಣನೆಯನ್ನು ಪಂಪ ಭಾರತದಲ್ಲಿ ಪೂರೈಸಿಕೊಳ್ಳುತ್ತಾನೆ. ಜೈನ ಧರ್ಮದ ಕಾವ್ಯದೊಳಗೆ ರಕ್ತದ ಓಕುಳಿಯನ್ನು ವಿವರಿಸುವ ಸ್ವಾತಂತ್ರ್ಯವಿಲ್ಲದ ಇವನು ಕುರುಕ್ಷೇತ್ರದಲ್ಲಿ ಹರಿ ಬಿಡುತ್ತಾನೆ. ಆದಿಪುರಾಣದಲ್ಲಿ ರಾಜರ ಕಲಹದಿಂದ ಜನಸಾಮಾನ್ಯರಿಗೆ ಅಪಾಯವೆನ್ನುವ ಪಂಪ ಅದರ ಪರಿಣಾಮವನ್ನು ಮುಂದೆ ಲೌಕಿಕ ಕಾವ್ಯದೊಳಗೆ ಕಟ್ಟುತ್ತಾನೆ.

ಏಕೆಂದರೆ ಈ ಎರಡು ಕಾವ್ಯದಲ್ಲಿ ಪ್ರಾಮಾಣಿಕ ಸಂಧಾನದ ಮಾತಾಡುವುದು ಧರ್ಮರಾಯ ಮಾತ್ರ. ಕೃಷ್ಣನನ್ನು ಐದು ರಾಜ್ಯ ಕೇಳಿ ಸಂಧಾನಕ್ಕೆ ಕಳುಹಿಸುವಾಗ ರಾಜನಾದ ಸುಯೋಧನನ ಹತ್ತಿರ ನಿಷ್ಕಪಟಿಯಾಗಿ ಸಂಧಾನದ ಮಾತುಕತೆ ನಡೆಯಲಿ ಎನ್ನುತ್ತಾನೆ. ಇದನ್ನು ಎಷ್ಟರ ಮಟ್ಟಿಗೆ ದಾನವರಿಪು ಅನುಸರಿಸಿದ ಎಂಬುದು ಇಲ್ಲಿಯ ಬಹು ಮುಖ್ಯ ಪ್ರಶ್ನೆ. ಸಂಧಾನದ ಹೆಸರಲ್ಲಿ ದುರ್ಯೋಧನನ ಬಳಗವನ್ನು ಛಿದ್ರಿಸಲು ಮುಂದಾಗುವ ಮುರಾರಿ ಮೊದಲು ಆಯ್ಕೆ ಮಾಡಿಕೊಳ್ಳುವುದು ವಿದುರನನ್ನೇ. ಕೌರವನ ಹಸ್ತಿನಾಪುರ ಪ್ರವೇಶಿಸಿ ವಿದುರನ ಮನೆಗೆ ಮೊದಲು ಹೋಗುವ ಕೃಷ್ಣ ಕೌರವನ್ನು ಕೆರಳಿಸುತ್ತಾನೆ. ಓಲಗದಲ್ಲಿ ಕೋಪದಿಂದ **'**ದಾಸಿಯ ಮಗನ ಮನೆಯಲ್ಲಿ ಉಂಡ ಅನ್ನ ಹೀಗೆ ನುಡಿಸುತ್ತಿದೆ**'** ಎನ್ನುವ ಮಾತಿನಿಂದ ಕ್ರೋಧಗೊಂಡ ವಿದುರ ಸುಯೋಧನನ ಆಪತ್ತಿಗಾಗಿ ಇಟ್ಟಿದ್ದ ಬಿಲ್ಲನ್ನು ಮುರಿದು ಸಂಪೂರ್ಣವಾಗಿ ಪಾಂಡವರ ಪಕ್ಷವಾಗುತ್ತಾನೆ. ಇದನ್ನೇ ಕಾಯುತ್ತಿದ್ದ ಕೃಷ್ಣ ಗುರು ಪುತ್ರ ಅಶ್ವತ್ಥಾಮನನ್ನು ತನ್ನ ಮಾತಿನಿಂದ ಕೌರವನ

ಒಡ್ಡೋಲಗದಿಂದ ಹೊರಗೆ ಕರೆದು ತರುತ್ತಾನೆ. ಇಲ್ಲಿಂದ ಆಚೆಗೆ ಕುಂತಿಯೋಂದಿಗಾಡುವ **'ಗುರು ಕೃಪ ಶಲ್ಯ ಸಿಂಧುಸುತರಪ್ಪೊಡೆ ನಮ್ಮಯ ಪಕ್ಷ ಗುರು ಸುತನೀಗಳಖಿಳಾಸ್ತ್ರ'**. ಈಗ ಕರ್ಣನನ್ನು ಭೇದಿಸಬೇಕಿದೆ. ಆದರೆ ಅವನ ತ್ಯಾಗದ ಪ್ರಕರತೆ, ನಿಷ್ಠತೆಗೆ ಸಮಾನರಿಲ್ಲ ಎನ್ನುವ ಮಾತುಗಳು ಸಂಧಾನವೆಂಬುದು ಎಷ್ಟು ಕಪಟವಾಗಿತ್ತೆಂಬುದಕ್ಕೆ ಸಾಕ್ಷಿಯಾಗುತ್ತದೆ.

ಪಂಪನ ಕಾವ್ಯಗಳಲ್ಲಿ ಭರತ ಮತ್ತು ದುರ್ಯೋಧನ ಈ ಎರಡು ಪಾತ್ರಗಳು ಖಳನಾಯಕ ಮತ್ತು ದುರಂತ ನಾಯಕರು. ಕೌರವನಿಗೆ ರಾಜ್ಯಲಕ್ಷ್ಮಿಯನ್ನು ಹಂಚಿಕೊಳ್ಳುವ ಮನಸಿಲ್ಲ. ಭರತನಿಗೆ ತಾನೇ ರಾಜಾಧಿರಾಜನಾಗಬೇಕೆಂಬ ಹಂಬಲ. ಈ ಮನಸ್ಥಿತಿಯೇ ದಾಯಾದಿ ಕಲಹಕ್ಕೆ ಮುನ್ನುಡಿಯಾಗಿದೆ. ಇವರಿಬ್ಬರೂ ಮನುಷ್ಯನ ಬದುಕಿನ ಲೌಕಿಕ ಬದುಕಿನ ನಶ್ವರತೆಯಾಗುವ ಅಧಿಕಾರದ ಮೋಹಿಗಳಾಗಿಯೇ ಪಂಪ ಚಿತ್ರಿಸಿದ್ದಾನೆ. ಮಲ್ಲಯುದ್ಧದಲ್ಲಿ ಬಾಹುಬಲಿ ಭರತನನ್ನು ಮೇಲೆತ್ತಿ ಕೆಳಗೆ ಬಿಟ್ಟಾಗ ಅವಮಾನಿತನಾದ ಭರತ 'ಚಕ್ರರತ್ನವನ್ನು' ಪ್ರಯೋಗಿಸುವ ಸನ್ನಿವೇಶ ಮುಖ್ಯ. **'ನೆರೆದೆರಡುಂ ಬಲದರಸುಗಳಿರೆ ಪರಿಭವಮಂತು ತನಗೆ ಬರೆ ಮುನಿಸಿದ ದಳ್ಳುರಿಗಳನುಳುತ್ತುಂ ಚಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ'**. ಇದುವರೆಗೂ ಗಳಿಸಿದ ಚಕ್ರವರ್ತಿ ಪಟ್ಟ ಈ ಕ್ಷಣವೇ ನಾಶವಾದುದನ್ನು ಸಹಿಸಲು ಭರತನಿಂದ ಅಸಾಧ್ಯ. ಅದಕ್ಕಾಗಿಯೇ ಸೋಲನ್ನು ಒಪ್ಪಿಕೊಳ್ಳದೆ ಮತ್ತಷ್ಟು ಕೀಳು ಮಟ್ಟಕ್ಕೆ ಇಳಿಯುತ್ತಾನೆ. ಅಲ್ಲಿದ್ದ ಹಿರಿಯರು ಇದು ಧರ್ಮಯುದ್ಧ ಈ ಕೆಲಸ ರಾಜನಿಗೆ ಸರಿಯಾದುದಲ್ಲ ಎಂದಾಗ ತಲೆ ತಗ್ಗಿಸುತ್ತಾನೆ. ಬಾಹುಬಲಿಯಿಂದಾದ ಸೋಲಿಗಿಂತ ಜನರ ದೃಷ್ಟಿಯಲ್ಲಿ ತಾನು ಇದುವರೆವಿಗೂ ಗಳಿಸಿದ ದಿಗ್ವಿಜಯ ನಿರರ್ಥಕವಾಯಿತೆಂಬ ಆಕ್ರೋಷ ಭರತನಲ್ಲಿದೆ. ಪಂಪ ಭಾರತದಲ್ಲಿ **'ಸುಯೋಧನಂ ತನ್ನ ಬಾಳಂ ಕಿಳ್ತೊದರಿ ಮನದೊಳಾದೇವದಿಂ ದೇವಕಿನಂದನನ ಮೇಲೆ ವಾಯ್ವುದು'** ಎಂಬ ಸನ್ನಿವೇಶವನ್ನು ಪಂಪ ಕಟ್ಟಿಕೊಡುತ್ತಾನೆ. ಕೌರವನ ಓಲಗಕ್ಕೆ ಸಂಧಾನಕ್ಕೆ ಬಂದ ಮುರಾರಿ' ಪಾಂಡವರ ಸಾಮರ್ಥ್ಯವನ್ನು ಹೊಗಳುವ ಜೊತೆಗೆ ವಿದುರನನ್ನು ಎತ್ತಿಕಟ್ಟಿದಾಗ ಕ್ರೋಧಕ್ಕೆ ಒಳಗಾಗುವ ಸುಯೋಧನನು ಅವಮಾನಿತನಾಗಿ ಕೃಷ್ಣನ ಮೇಲೆ ಕತ್ತಿಯಿಂದ ಹಾರುತ್ತಾನೆ. ಆದರೆ ಇಲ್ಲಿ ಯಾವ ವೈರಾಗ್ಯಕ್ಕೂ ಅವಕಾಶವಿಲ್ಲ. ಯುದ್ಧದ ಪ್ರಕರತೆ ಹೆಚ್ಚಾಯಿತಷ್ಟೆ. ಇವರಿಬ್ಬರೂ ಏಕಚಕ್ರಾಧಿಶ್ವರರಾಗುವ ಬಯಕೆವುಳ್ಳವರೆ. ತಾವು ಅನುಭವಿಸುವ ಹೆಣ್ಣನ್ನು ಇನ್ನೊಬ್ಬರಿಗೆ ಬಿಟ್ಟುಕೊಡಲಾರದೆ, ಕಸಿದುಕೊಳ್ಳುವ ಕಾತುರದಲ್ಲಿ ತಮ್ಮ ಅವನತಿಯನ್ನು ಕಾಣುತ್ತಾರೆ.

ಆದಿಪುರಾಣದಲ್ಲಿಯ ಭರತ ಮತ್ತು ಬಾಹುಬಲಿಯ ನಡುವಿನ ಸಂಘರ್ಷ ಜೈನದೀಕ್ಷೆಯೊಂದಿಗೆ ಮುಕ್ತಾಯವಾಗುತ್ತದೆ. ಹಿಂಸೆಯನ್ನಾಗಲಿ, ರಕ್ತವನ್ನಾಗಲಿ ಸಾಮಾನ್ಯನ ಸಾವನ್ನಾಗಲಿ ಇದು ವಿವರಿಸುವುದಿಲ್ಲ. ಮನುಷ್ಯ ಸಂಬಂಧಗಳ ನಡುವಿನ ಅಸೂಹೆ, ಸಣ್ಣತನ, ಲೋಭತನಕ್ಕೆ ಹೇಸಿಗೆ ಪಡುವ ಬಾಹುಬಲಿ ರಾಜ್ಯಲಕ್ಷ್ಮಿಯ ಆಸೆಗೆ ಒಳಗಾದವರಿಗೆ ಸರಿತಪ್ಪಿನ ಅರಿವಿರುವುದಿಲ್ಲ. ಇದು ಪ್ರಾರಂಭದಲ್ಲಿ ಸಿಹಿಯಾಗಿರುತ್ತದೆ. ಇಂದ್ರಿಯ ಸುಖಕ್ಕಿಂತ ಪರಮವಾದುದು ಅತೀಂದ್ರಿಯ ಸುಖವೆಂದು ಮೋಕ್ಷ ಸಾಧನೆಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಹಾಗಾಗಿಯೇ ಬಾಹುಬಲಿ **'ಸೋದದರೊಳ್ ಸೋದರರಂ ಕಾದಿಸುವುದು, ಸುತನ ತಂದೆಯೆಡೆಯೊಳ್ ಬಿಡದುತ್ಪಾದಿಸುವುದು, ಕಳೆದಿಡುವುದೆ ಕಷ್ಟಂ ಭೂತಳ ರಾಜ್ಯ ವಿಮೋಹಮಂ'** ಎನ್ನುವುದು. ರಾಜ್ಯದಾಸೆಯನ್ನು ಬಿಡುವ ಬಾಹುಬಲಿಗೆ ಕೈವಲ್ಯಜ್ಞಾನದ ಆಸೆ ಮೂಡುತ್ತದೆ.

DOI: 10.59176
http://www.kristujayantijournal.com/index.php/KJKSP

ಈಗಗಲೇ ಉಳಿದ ಸಹೋದರರು ಭರತನೇ ತಮ್ಮ ಆಶೀರ್ವಾದ ಪಡೆಯಲು ನಮ್ಮ ಕಾಲಿಗೆ ಬೀಳುವಂತ ದೀಕ್ಷೆಯಲ್ಲಿ ತಲ್ಲೀನರಾಗಿದ್ದಾರೆ. ಈಗ ಬಾಹುಬಲಿಯ ಸರದಿ. ಇವನು ಪುರುದೇವನಿಂದ ದೀಕ್ಷೆ ಪಡೆದರೂ ಕೈವಲ್ಯ ಜ್ಞಾನ ಲಭಿಸಿಲ್ಲ ಏಕೆ ಎಂದು ಭರತ ಕೇಳಿದಾಗ ಆದಿನಾಥನು ಬಾಹುಬಲಿಗೆ ತಾನು ನಿಂತಿರುವ ಜಾಗ ಭರತನದೆಂದು ಅಳುಕಿದೆ ಎನ್ನುತ್ತಾನೆ. ಆಗ ಭರತ ತನ್ನ ಇಡೀ ಪರಿವಾರ ಸಮೇತ ಹೋಗಿ ಬಾಹುಬಲಿಯ ಕಾಲಿಗೆರಗುತ್ತಾನೆ. ಇದು ಮತ್ತೊಂದು ಬಗೆಯ ವ್ಯಾಮೋಹವನ್ನು ಹೇಳುತ್ತಲೇ ರಾಜತ್ವ ಎಂಬುದು ಸದಾ ಧರ್ಮವನ್ನು ಕಾಪಾಡಬೇಕು ಅದರ ಅದೀನದಲ್ಲಿಯೇ ಬದುಕಬೇಕಾದ ಅನಿವಾರ್ಯತೆಯನ್ನು ಬಿತ್ತರಿಸುತ್ತದೆ. ಕೆಟ್ಟದನ್ನು ಯೋಚನೆ ಮಾಡುವುದೇ ತಪ್ಪು, ಆದರೆ ಪಾಪದ ಕೆಲಸವನ್ನು ಮಾಡಿದ್ದೇನೆ ಅದರಿಂದ ತಪ್ಪಿಸಿಕೊಳ್ಳಲು ತಪ್ಪಸ್ಸಿನ ಕಡೆಗೆ ಸಾಗುತ್ತೇನೆಂಬ ಬಾಹುಬಲಿಯ ನಿರ್ಧಾರ ಯಶೋಧರ ಚರಿತೆಯ ಹಿಟ್ಟಿನ ಹುಂಜದ ಸಂದರ್ಭವನ್ನು ನೆನಪಿಸುತ್ತದೆ.

ಆದಿಪುರಾಣದಲ್ಲಿ ಪ್ರಸ್ತಾಪಗೊಳ್ಳುವ ಧರ್ಮಯುದ್ಧವು ಸಮರ್ಥರ ನಡುವಿನ ಯುದ್ದವೇ ಎಂಬ ಅನುಮಾನವನ್ನು ಮೂಡುತ್ತದೆ. ಪಂಪನೇ 'ಭರತೇಶ್ವರ ಪಂಚಶತ ಶರಾಸನೋತ್ಸೇಧನಪ್ಪುದೆರಿಂ ಪಂಚ ವಿಂಶತ್ತುತ್ತರ ಬಾಹುಬಲಿ' ಎನ್ನುತ್ತಾನೆ. (ದೃಷ್ಟಿಯುದ್ದ, ಜಲಯುದ್ಧ, ಮಲ್ಲಯುದ್ಧದಲ್ಲಿ ಗೆಲ್ಲುವ ಬಾಹುಬಲಿಯ ಎತ್ತರ ೫೨೫ ಬಾಣದ ಉದ್ದ. ಸೋಲುವ ಭರತನ ಎತ್ತರ ೫೦೦ ಬಾಣಗಳ ಉದ್ದ) ಭರತ ಮತ್ತು ಬಾಹುಬಲಿ ನಡುವೆ ನಡೆಯುವ ಈ ಕಾಳಗವು ಸಂಧಾನದ ವಿಫಲತೆಯನ್ನು ವಿವರಿಸುತ್ತದೆ. ಇದಕ್ಕೂ ಪಂಪಭಾರತದಲ್ಲಿ ಬರುವ ಶ್ರೀ ಕೃಷ್ಣನ ಸಂಧಾನದ ಕಾರ್ಯಕ್ಕೂ ತುಂಬಾ ವ್ಯತ್ಯಾಸವಿದೆ. ಮಹತ್ತರನು ಬೆಂಕಿಗೆ ನೀರೆಚುವ ಕಡೆ ಗಮನ ಅರಿಸಿದರೆ, ಕೃಷ್ಣ ಬೆಂಕಿಗೆ ತುಪ್ಪ ಸುರಿಯುತ್ತಾನೆ. ದುರ್ಯೋಧನನ ಕ್ರೋಧ, ಕೃಷ್ಣನ ಮೇಲಿನ ಅಸಮಧಾನದಿಂದ ಮತ್ತಷ್ಟು ಹಿಮ್ಮಡಿಯಾಗುತ್ತದೆ. ಇಲ್ಲಿಯ ಭರತನ ಅಸಹಾಯಕತೆ ಮುಂದೆ ರತ್ನಾಕರವರ್ಣಿಯನ್ನು ತಟ್ಟಿದರೆ, ದುರ್ಯೋಧನೆಂಬ ದುರಂತ ಪಾತ್ರ ಭೀಮನನ್ನು ಕಲಕಿದೆ. ಹಾಗಾಗಿ ಈ ಅಂತರಪಠ್ಯೀಯ ಅಧ್ಯಯನ ಇವತ್ತಿಗೆ ಬಹಳ ಮುಖ್ಯ. ಪಂಪನ ಹಿಂದಿರುವ ಸಾಮಾಜಿಕ, ಆರ್ಥಿಕ, ಧಾರ್ಮಿಕ ಒತ್ತಡಗಳು ಕಾವ್ಯದಲ್ಲಿ ಕೆಲಸ ಮಾಡಿವೆ. ಪಂಪನ ಧರ್ಮ ಹಾಗೂ ಕಾವ್ಯ ಧರ್ಮ ಎರಡು ಪರಿಭಾಷೆಗಳು ಇವತ್ತಿನ ಸಮುದಾಯಕ್ಕೆ ಅವಶ್ಯಕವಾಗಿವೆ. ಹಾಗಾಗಿ ಪಂಪ ಕಟ್ಟುವ ಕಾವ್ಯಧರ್ಮ ಎಂಬುದು ಸಮಾಜವನ್ನು ವೈಚಾರಿಕವಾಗಿ, ಜನಪರವಾಗಿ, ಸೃಜನಶೀಲವಾಗಿ ರೂಪಿಸುವುದಾಗಿದೆ.

DOI: 10.59176
http://www.kristujayantijournal.com/index.php/KJKSP

ಸಂಪುಟ ೩, ಸಂಚಿಕೆ ೧, ಮಾರ್ಚ್ ೨೦೨೪ | E-ISSN: 2583-8245
Volume 3, Issue 1, March 2024

**ಪರಾಮರ್ಶನ ಗ್ರಂಥಗಳು**

೧. ಆದಿಪುರಾಣ ಸಂಗ್ರಹ –(ಸಂ) ಎಲ್. ಗುಂಡಪ್ಪ, ೨೦೧೬, ಪ್ರಸಾರಾಂಗ, ಮೈಸೂರು.

೨. ಪಂಪಭಾರತಂ – ಎನ್. ಅನಂತರಂಗಾಚಾರ್, ೨೦೦೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗಳಿ, ೨೦೧೧, ಗೀತಾ ಬುಕ್ ಹೌಸ್, ಮೈಸೂರು.

೪. ಚಂಪೂ ಕವಿಗಳು – ಪಿ. ವಿ. ನಾರಾಯಣ, ೨೦೦೮, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೫. ತೆರೆದ ಪಠ್ಯ – (ಸಂ) ನಟರಾಜ್ ಹುಳಿಯಾರ್, ೨೦೧೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

DOI: 10.59176
http://www.kristujayantijournal.com/index.php/KJKSP